ತಾರೀಖು 21ನೇ ಸಪ್ಟಂಬರು 1889.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖುವರಿಗೆ ಹಿಡಿಯಲ್ಪಡುವ ಆನೆಗಳು ಸಹ 1889ನೇ ಇಸವಿ ನವಂಬರು ತಾರೀಖು 4ರಲ್ಲು ಮೈಸೂರಿನಿಂದ 30 ಮೈಲಿ ಫಾಸಲೆಯಲ್ಲಿ ಇರುವ ಹೆಗ್ಗಡದೇವನ ಕೋಟೇ ತಾಲ್ಲೂಕು ಹಂಪಾಪುರದ ಮೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕಣಸರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಹೆಸರು.	ಜಾತಿ.	ಯೆತ್ತರ.		ಹಿಡದ ತಾರೀಖು.	ಪರಾ.
			ಅಡಿ	ಅಂಗುಲ		
1	ಬಲರಾಮ	ಗಂಡು	5	2	88ನೇ ಡಿಕಂಬರ್ ತಾರೀಖು 2	
2	ಕೃಷ್ಣ	ಡಿಟೋ	4	..	22—6—89	

ಷರತ್ತುಗಳು—ಸರ್ಕಾರ ಹರಾಜ್ ಕೈದಾದ ಕೂಡ್ಲೆ ಚಡ ದರಖಾಸ್ತುದಾರನು ಹರಾಜ್ ಮೊಬಲಗಿನ ಮೇಲೆ ಕೇಕಡಾ 25 ರೂಪಾಯಿ ಕೀವಣಿಯನ್ನ ಪಾವತಿಮಾಡತಕ್ಕದ್ದು. ಬುಕ್ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳವ್ರೊಳಗಾಗಿ ಪಾವತಿಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಕೀವಣಿ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲಾಗುತ್ತೆ. ಮತ್ತು ಸದರೀ ಆನೆಗಳು ಪುನಹಾ ಹರಾಜ್ ಮಾಡುವದರಲ್ಲಿ ಪುಂಟಾಗಬಹುದಾದ ಲುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ. ನಫೇ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲಾ ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯತು ತಗಲುವ ಖರ್ಚು ವಹಿಸಬೇಕು.

ಯಲ್. ರಿಕ್ಕೆಟ್ಸ್,
ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಕಿಲ್ಲಘಟ್ಟದ ಕಸಬೇಲಿಯಿರುವ ಗುಡಹಳ್ಳಿ ಚಿನ್ನಪ್ಪನಮಗ ಮುನಿಯಪ್ಪನ ವಿಷಯದಲ್ಲಿ—

ಸ್ನ 1889ನೇ ಇಸವಿ ದಿವಾಳಿ ಕೇಸ್ ನಂಬರ್ 12.

ಹುಕುಂ.

ಮೇಲ್ಕಂಡ ಮುನಿಯಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್‌ಜಡ್ಜ್‌ರಾವ ಮೆ॥ ಎಲ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ಮುನಿಯಪ್ಪನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ಕ್ರಡಿಟರ್ ರರಫ್ ಪ್ಲೀಡರ್ ಮೆ॥ ಗಂಗಾಧರಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—2—3—4ನೇ ಕ್ರಡಿಟರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮುನಿಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿನೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಕ್ಲರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ನ 1889ನೇ ಇಸವಿ ಅಕ್ಟೋಬರ್ 24ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ದೇಣೆಯ ಪೈಸಲಾದ ವರ್ಷ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಕಿಲ್ಲಘಟ್ಟದಲ್ಲಿತರಕ್ಕ ಬುಚಮ್ಮನವರ ಮುನಿಯಪ್ಪ	75	6	0	..	ಚಿಕ್ಕಬಳಾಪುರ ಮುನಸೀಫ್ ಕೋರ್ಟ್ 1888ನೇ ಅಪೀಲಿನಲ್ 20ನೇ ನಂ. ಡಿಕ್ರೀ ಬಾಬತು ಡಿಟೋ	
2	ಡಿಟೋ ಚಿಕ್ಕನರಸುಪ್ಪಯ್ಯನ ಮಗಳು ಬೂಚಮ್ಮ				..		
3	ಡಿಟೋ ಬೇವಿನಮರದ ಕೊವಾರಪ್ಪ ..	30	0	0	1885	ಪತ್ರದ ಬಾಬತು	
4	ಡಿಟೋ ಚಿನ್ನಗುಡಿ ರುದ್ರಪ್ಪ ..	40	0	0	1886	ಪತ್ರದ ಬಾಬತು	
	ಜುಮ್ಲಾ	145	6	0			